**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.884-2014**

**ಪಿ.ಡಬ್ಲ್ಯೂಃ 16**

**ಸಿ.ಡಬ್ಲ್ಯೂಃ 16**

ಸಾಕ್ಷಿದಾರರ **ಹೆಸರು** ಃ ನಿಂಗಪ್ಪ

ತಂದೆಯ **ಹೆಸರು** ಃ ಬಸಪ್ಪ

**ವಯಸ್ಸು** ಃ **65 ವರ್ಷ**

**ಉದ್ಯೋಗ** ಃ ವ್ಯವಸಾಯ

**ವಾಸಸ್ಥಳ** ಃ ಸಿದ್ದ್ಲೀಪುರ

**ದಿನಾಂಕಃ 19-10-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

*2011* ರಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆ ಬಾವಿಕೆರೆಯಲ್ಲಿ ಪ್ರಾರಂಭವಾಯ್ತು. ಆ ಶಾಖೆಯ ಮ್ಯಾನೇಜರ್ ಆದಂತಹ ಆರೋಪಿಯಾದ ರವಿನಾರಾಯಣ ರವರು ನಮಗೆ ಪರಿಚಿತವಾಗಿ ನಮ್ಮ ಜೊತೆ ಚೆನ್ನಾಗಿ ಇದ್ದರು. ಸದರಿ ಬ್ಯಾಂಕಿನಲ್ಲಿ ನಾನು ಯಾವುದೇ ಖಾತೆ ತೆರೆದಿರುವುದಿಲ್ಲ. ಮ್ಯಾನೇಜರ್ ಆದ ಆರೋಪಿ ನನ್ನ ಬಳಿ ಬಂದು ನನಗೆ ಒಂದು ಸಹಾಯ ಮಾಡಲು ಕೇಳಿದನು. ನಾನು ಏನು ಎಂದು ಕೇಳಿದಾಗ ನನ್ನ ಹೆಂಡತಿಯ ಬಂಗಾರದ ಆಭರಣಗಳು ಇದ್ದು, ಅವುಗಳನ್ನು ನನ್ನ ಹೆಸರಿನಲ್ಲಿ ಖಾತೆ ತೆರೆದು ಒತ್ತೆ ಇಟ್ಟು ಅದರಿಂದ ಹಣ ಪಡೆದು ನಂತರ ಜಮಾ ಮಾಡುತ್ತೇನೆಂದು ತಿಳಿಸಿದಾಗ ನಾನು ವಿಶ್ವಾಸದಿಂದ ಆರೋಪಿ ಹೇಳಿದಂತೆ ಖಾತಾ ಪುಸ್ತಕ, ಓಚರ್, ಗೋಲ್ಡ್ ಲೋನ್ ಅರ್ಜಿ ಹಾಗೂ ಇತರೇ ದಾಖಲಾತಿಗಳಿಗೆ ನನ್ನ ಸಹಿಗಳನ್ನು ಪಡೆದುಕೊಂಡರು. *2013* ರಲ್ಲಿ ನನಗೆ ಬ್ಯಾಂಕಿನ ಮುಖ್ಯ ಶಾಖೆಯಿಂದ ನೋಟೀಸು ಬಂದಿತ್ತು. ಆಗ ನಾನು ಹೋಗಿ ವಿಚಾರಿಸಿದಾಗ ನನಗೆ ಬ್ಯಾಂಕಿನವರು ನಕಲಿ ಆಭರಣಗಳನ್ನು ಒತ್ತೆ ಇಟ್ಟು ಸಾಲ ಪಡೆದಿದ್ದೀರಿ ಎಂದು ಹೇಳಿದರು. ಆಗ ನಾನು ಆ ರೀತಿಯ ಯಾವುದೇ ಖಾತೆಯನ್ನು ತೆರೆದು ಆಭರಣಗಳನ್ನು ಇಟ್ಟು ಹಣವನ್ನು ಪಡೆದಿಲ್ಲ ಎಂದರೆ ತಿಳಿಸಿದೆನು ಹಾಗೂ ಬ್ಯಾಂಕಿನ ಶಾಖೆಯಲ್ಲಿ ಯಾವುದೇ ಖಾತೆ ಇಲ್ಲ ಎಂದು ತಿಳಿಸಿದೆನು. ನಂತರ ಪೊಲೀಸರು ಠಾಣೆಗೆ ಕರೆಸಿ ನಮ್ಮಿಂದ ಮಾಹಿತಿ ಪಡೆದು ಸಹಿ ಪಡೆದಿರುತ್ತಾರೆ. ಬಂಗಾರವನ್ನು ಒತ್ತೆ

ಇಟ್ಟು ಮ್ಯಾನೇಜರ್ ಹಣವನ್ನು ಪಡೆದಿರುತ್ತಾರೆ ಎಂದು ತಿಳಿಯಿತು. ಸಾಕ್ಷಿಯು ನಿಪಿ*4* ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-*4*(ಬಿ) ಎಂದು ಗುರುತಿಸಲಾಯ್ತು.

***ಪಾಟೀ ಸವಾಲು : ಆರೋಪಿ ಪರ** ಶ್ರೀ ಎಂ ಕೆ ಟಿ **ವಕೀಲರಿಂದ.***

ನಾನು ಈಗ್ಗೆ ಸುಮಾರು ***25*** ವರ್ಷಗಳ ಹಿಂದೆ ಬ್ಯಾಂಕಿನ ವ್ಯವಹಾರ ಮಾಡುತ್ತಿರುತ್ತೇನೆಂದರೆ ಸರಿ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯ ದಿನಾಂಕ, ವಾರ ನೆನಪಿಲ್ಲ. ನನಗೆ ಬ್ಯಾಂಕಿನ ಮುಖ್ಯ ಶಾಖೆಯಿಂದ ನೋಟೀಸು ಬಂದ ನಂತರ ಬಾವಿಕೆರೆಯ ಬ್ಯಾಂಕಿನ ಶಾಖೆಯಲ್ಲಿ ಹಣ ದುರುಪಯೋಗವಾಗಿದೆ ಎಂದು ತಿಳಿಯಿತು. ನಾನು ಖುದ್ದಾಗಿ ಬ್ಯಾಂಕಿನಲ್ಲಿ ಹಣ ದುರುಪಯೋಗವಾದ ಬಗ್ಗೆ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ನಾವು ಯಾವುದೇ ವ್ಯವಹಾರ ಮಾಡುವಾಗ ಓದಿ, ಹೇಳಿ, ಕೇಳಿ ಸಹಿ ಮಾಡುತ್ತೇನೆಂದರೆ ಸರಿ. ನಾನು ಯಾವ ದಿನದಂದು ಆರೋಪಿತರಿಗೆ ದಾಖಲೆಗಳಲ್ಲಿ ಸಹಿ ಮಾಡಿ ನೀಡಿರುತ್ತೇನೆಂದು ನೆನಪಿಲ್ಲ. ನಾನು ಬಾವಿಕೆರೆಯ ಬ್ಯಾಂಕಿನ ಶಾಖೆಯ ಜೊತೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ನಾನು ಪೋಲೀಸರು ಬರೆದ ನನ್ನ ಹೇಳಿಕೆಯನ್ನು ಓದಿರುವುದಿಲ್ಲ. ಆರೋಪಿಯು ನ ನನ್ನ ಹೆಸರಿನಲ್ಲಿ ಯಾವುದೇ ಖಾತೆಯನ್ನು ತೆರೆದಿಲ್ಲ ಹಾಗೂ ಬಂಗಾರದ ಆಭರಣಗಳನ್ನು ಒತ್ತೆ ಇಟ್ಟು ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***ಮರುವಿಚಾರಣೆ:*** ***ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***